aglasem.com

FOR CBSE CLASS 10 PREPARATION

# CBSE Class 10 Sample Paper 2027 Solution (Marking Scheme) for Kannada

| EXAM | YEAR | TYPE | SUBJECT |
| --- | --- | --- | --- |
| CBSE Class 10 | 2027 | Solutions | Kannada |

# CENTRAL BOARD OF SECONDARY EDUCATION

## MARKING SCHEME -2026-2027

## SUBJECT: KANNADA

### NAME KANNADA (015)

## CLASS - X

| | | | |
|---|---|---|---|
| ಮುಖ್ಯ ಪ್ರಶ್ನೆ ಸಂಖ್ಯೆ | ಉಪ ಪ್ರಶ್ನೆ ಸಂಖ್ಯೆ | ಸರಿ ಆಯ್ಕೆ ಮತ್ತು ಸರಿ ಉತ್ತರಗಳು | ಅಂಕಗಳು |
| | | **ಗದ್ಯಭಾಗ-1** | |
| 1. | I | (B) ಒಂಭತ್ತು | 1 |
| | II | (A) ಕಪ್ಪು ಮಣ್ಣಿನ ನಾಡು | 1 |
| | III | (B) ಕೊಡಗು, ಹೈದರಾಬಾದ್ | 1 |
| | IV | (D) ತಮಿಳಿನ 'ಶಿಲಪ್ಪದಿಕಾರಂ' ಕೃತಿಯಿಂದ ಸ್ವೀಕರಿಸಲಾಗಿದೆ | 1 |
| | V | (C) ಹೇಳಿಕೆ-೧ ಮತ್ತು ಹೇಳಿಕೆ -೨ ಎರಡೂ ಹೇಳಿಕೆಗಳು ಸರಿಯಾಗಿವೆ. | 1 |
| | | **ಗದ್ಯಭಾಗ-2** | |
| 2 | I | (C) ಕಿಲ್ಲಾರಿಯ ಬಳಿ | 1 |
| | II | (B) ಮೂರು | 1 |
| | III | (B) ಭೂಮಿಯು ತನ್ನ ಮತ್ತು ಸೂರ್ಯನ ಸುತ್ತ ತಿರುಗುತ್ತದೆ. | 1 |
| | IV | (D) ಜ್ವಾಲಾಮುಖಿ | 1 |
| | V | (A) ಲಾತೂರು ಮತ್ತು ಉಸ್ಮಾನಾಬಾದ್ ಜಿಲ್ಲೆ | 1 |
| | | **ಪರಿಚಿತ ಗದ್ಯಭಾಗ - ಯುದ್ಧ** | |
| 3 | I | ಜಮೀನು ಮತ್ತು ಆಸ್ತಿಯು ಮುದುಕಿಯು ನೆಮ್ಮದಿಯಿಂದ ಬದುಕಲು ಇದ್ದ ಆಧಾರವಾಗಿತ್ತು. | 1 |
| | II | ಎರಡು ದೇಶದವರ ಧರ್ಮ ಬೇರೆಯಾಗಿರುವುದೇ ಯುದ್ಧಕ್ಕೆ ಕಾರಣವಾಗಿತ್ತು. | 1 |
| | III | ಮನೆಯ ಮಕ್ಕಳನ್ನೂ ಯುದ್ಧಕ್ಕೆ ಕರೆದೊಯ್ಯುತ್ತಾರೆಂದು ಮುದುಕಿಯು ಶಪಿಸಿದಳು. | 1 |
| | IV | ಪುಟ್ಟ ಮಗುವಿನ ಅಳು ಕೇಳಲು ಯುದ್ಧಕ್ಕೆ ಹೋದ ಮುದುಕಿಯ ಮಗನು ಕುತೂಹಲದಿಂದ ಕಾಯುತ್ತಿದ್ದಾರೆ ಎಂದು ಮುದುಕಿ ಹೇಳಿದಳು. | 1 |
| | V | ಎಲ್ಲ ದುಃಖ ನುಂಗಿಕೊಂಡು ಮುದುಕಿಯು ಮಗನನ್ನು ಸಾಕಿ ಸಲಹಿದಳು. | 1 |
| | | **ಪರಿಚಿತ ಪದ್ಯಭಾಗ - ಸಂಕಲ್ಪಗೀತೆ** | |

| | | | |
|---|---|---|---|
| 4 | I | ಸಂಸಾರವೆಂಬ ಸಾಗರದಲ್ಲಿ ಹಡಗು ಬಿರುಗಾಳಿಗೆ ಸಿಲುಕಿ ಮುಳುಗಬಹುದೆಂದು ಎಚ್ಚರಿಕೆಯಿಂದ ನಡೆಸಬೇಕು. | 1 |
| | II | ಬರಡಾಗಿರುವ ಕಾಡುಮೇಡುಗಳು ಚಿಗುರಲು ವಸಂತ ಕಾಲ ಬರಬೇಕು. | 1 |
| | III | ಆಸೆಯನ್ನು ಕಳೆದುಕೊಂಡವರ ಜೀವನದಲ್ಲಿ ಹೊಸ ಭರವಸೆಯನ್ನು ಮೂಡಿಸಬೇಕು. | 1 |
| | IV | ಮತಗಳೆಲ್ಲವೂ ಪಥಗಳು ಎನ್ನುವ ಹೊಸ ಎಚ್ಚರದಲಿ ಬದುಕಬೇಕು. | 1 |
| | V | ನಾಳಿನ ಕನಸನ್ನು ಬಿತ್ತುವ ದೃಢಸಂಕಲ್ಪ ಕೈಗೊಳ್ಳಬೇಕು. | 1 |
| | | **SECTION – B**<br>**ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ** | |
| 5 | I | (A) ಅಲ್ಲಿ ಹಿರಿದಾದ ತೊರೆಯು ಹರಿಯುತ್ತಿತ್ತು. | 1 |
| | II | (D) ಬಲಗಾಲಿನಿಂದ | 1 |
| | III | (B) ಹಬ್ಬದ ಭಕ್ಷ-ಭೋಜ್ಯಗಳನ್ನು ವಿತರಣೆ ಮಾಡುವ ಸಂಪ್ರದಾಯವಿತ್ತು. | 1 |
| | IV | (B) ಉತ್ತಮ ಪುರುಷ ಸರ್ವನಾಮ | 1 |
| | V | (A). ಸಟೆ | 1 |
| | VI | (C) ರಾಷ್ಟ್ರಪತಿಗಳು ಪ್ರಶಸ್ತಿಯನ್ನು ಪ್ರದಾನ ಮಾಡಿದರು. | 1 |
| | VII | (B) ಅಳುವಿಕೆ | 1 |
| | VIII | (C) ಅಂಕಿತನಾಮ ಮತ್ತು ಅನ್ವರ್ಥನಾಮ | 1 |
| | IX | (D) 1 ಮತ್ತು 3 | 1 |
| | X | (A) ಗುಣಸಂಧಿ | 1 |
| 6 | I | ಮುಂಗಾರು ಮಾರುತಗಳು ನೈರುತ್ಯ ದಿಕ್ಕಿನಿಂದ ರಭಸವಾಗಿ ಬೀಸುವವು | 1 |
| | II | ಚಿತ್ರವು ಮಕ್ಕಳಿಂದ ಸುಂದರವಾಗಿ ಬಿಡಿಸಲ್ಪಟ್ಟಿತು. | 1 |
| | III | ನಿರುದ್ಯೋಗ ಸಮಸ್ಯೆಯಿಂದ ದೇಶದ ಪ್ರಗತಿಗೆ ಧಕ್ಕೆಯಾದೀತು. | 1 |
| | IV | ಯಾವುದೇ ತೊಂದರೆ ಇಲ್ಲದೆ, ಸುಲಭವಾಗಿ, ಸುರಕ್ಷಿತವಾಗಿ ಒಂದು ಕೆಲಸ ಮುಗಿದುಹೋಗುವುದು ಅಥವಾ ಒಂದು ಸ್ಥಳವನ್ನು ತಲುಪುವುದು.<br>ಅಥವಾ<br>ಯಾವುದೇ ಕಷ್ಟ, ಅಡ್ಡಿ-ಆತಂಕಗಳು ಬಂದಾಗ ತಾಳ್ಮೆ ಕಳೆದುಕೊಳ್ಳದೆ, ಸ್ಥಿರ ಮನಸ್ಸಿನಿಂದ ಎದುರಿಸುವವರು ಮಾತ್ರ ದೀರ್ಘಕಾಲದ ಸುಖ-ಸಂತೋಷಗಳನ್ನು ಅನುಭವಿಸುತ್ತಾರೆ.<br><br>**ಸೂಚನೆ :-** ಮಕ್ಕಳು ಈ ರೀತಿಯ ಅರ್ಥ ಬರುವ ಹಾಗೆ ಬರೆದಿದ್ದರೆ ಸರಿ ಉತ್ತರ ಎಂದು ಪರಿಗಣಿಸುವುದು. | 1 |
| | V | ಅತ್ಯಂತ ವಿನಮ್ರತೆಯಿಂದ ಅಥವಾ ಅಸಹಾಯಕತೆಯಿಂದ ಬೇಡಿಕೊಳ್ಳುವುದು, ಯಾಚಿಸುವುದು ಅಥವಾ ಕೇಳಿಕೊಳ್ಳುವುದು).<br>**ಸೂಚನೆ :** ಮಕ್ಕಳ ಸ್ವಂತಿಕೆಯನ್ನು ಪರಿಗಣಿಸಬೇಕು. | 1 |
| 7 | I | (B) ಬಡತನವನ್ನು | 1 |
| | II | (A) ಭಗತ್ ಸಿಂಗ್ ನ ಸ್ವಾತಂತ್ರ್ಯ ಪ್ರೇಮವನ್ನು ನೆನಪಿಸುತ್ತದೆ. | 1 |
| | III | (C) ಗಾಂಧೀಜಿ | 1 |

| | | | |
|---|---|---|---|
| | IV | (D) ಸಕ್ಕರೆ | 1 |
| | V | (D) ನಾಶವಾಗುತ್ತಿದೆ | 1 |
| | | **PART – 2 (40-ಅಂಕಗಳು)**<br>**SECTION -C**<br>**(ಬರವಣಿಗೆ ಕೌಶಲ್ಯ) = 12 ಅಂಕಗಳು** | |
| 8 | | **ಪತ್ರ ಲೇಖನ**<br>• ಇಂದ - ಇವರಿಗೆ<br>• ಸ್ಥಳ- ದಿನಾಂಕ - ಮಾನ್ಯರೇ, ವಿಷಯ<br>• ಪತ್ರದ ಒಡಲು -ತಮ್ಮ ವಿಶ್ವಾಸಿ - | <br>1<br>1<br>2 |
| | | **ಹುದ್ದೆಗೆ ಅರ್ಜಿ**<br>• ಇಂದ - ಇವರಿಗೆ<br>• ಸ್ಥಳ- ದಿನಾಂಕ - ಮಾನ್ಯರೇ, ವಿಷಯ - ಉಲ್ಲೇಖ-<br>• ಸ್ವ-ವಿವರ -ತಮ್ಮ ವಿಶ್ವಾಸಿ/ಅಭ್ಯರ್ಥಿಯ ಸಹಿ - | <br>1<br>1<br>2 |
| 9 | | **ವರದಿ**<br>• ಶೀರ್ಷಿಕೆ — ವರದಿಗಾರರ ರುಜು<br>• ಸ್ಥಳ - ದಿನಾಂಕ -<br>• ವರದಿಯ ಒಡಲು - | <br>1<br>1<br>2 |
| 10 | | **ಪ್ರಬಂಧ**<br>• ಪೀಠಿಕೆ --<br>• ವಿಷಯ ವಿವರಣೆ, ಭಾಷಾಶೈಲಿ -<br>• ಉಪಸಂಹಾರ/ಮುಕ್ತಾಯ - | <br>1<br>2<br>1 |
| | | **SECTION – D**<br>**ಪದ್ಯಗಳ ಅಧ್ಯಯನ** | |
| **11.** | | **ಎರಡು ವಾಕ್ಯಗಳ ಉತ್ತರಗಳು** | |
| | I | ರಾಮ ಲಕ್ಷ್ಮಣರು ವನವಾಸಕ್ಕೆ ಹೋದ ಸಂದರ್ಭದಲ್ಲಿ ಸೀತೆಯನ್ನು ರಾವಣನು ಅಪಹರಿಸಿರುತ್ತಾನೆ. ಸೀತಾಪಹರಣದ ನಂತರ ಶೋಕತಪ್ತರಾದ ರಾಮಲಕ್ಷ್ಮಣರು, ಸೀತೆಯನ್ನು ಹುಡುಕುತ್ತಿರುತ್ತಾರೆ. ಆಗ ರಾಮನು ಸೀತೆಯು ನನಗೆ ನನಗೆ ದೊರೆಯುವಳೇ? ಎಂದು ಬೇಡಿಕೊಂಡನು. | **2** |
| | II | ಕೃಷ್ಣನ ಮಾತನ್ನು ಕೇಳಿ ಕರ್ಣನ ಕೊರಳ ಸೆರೆಹಿಗ್ಗಿದವು , ಕಂಬನಿಯು ¨ರಭಸದಿಂದಮುಂದೆ ಬಂದು , ಅದಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ "ಅಯ್ಯೋ , ದುರ್ಯೋಧನಿಗೆ ಕೇಡಾಯಿತು " ಎಂದನು . ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ ¸ಸುಮ್ಮನೆ ಹೋಗುವುದೇ . ಕೃಷ್ಣನು "ನನ್ನವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು" ಎಂದು ಅತೀವ ದುಃಖಿತನಾದನು. | **2** |

| | | | |
|---|---|---|---|
| | III | ಎಲ್ಲಾ ಮಕ್ಕಳು ಸಂಜೆ ಶಾಲೆಯಿಂದ ಮನೆಗೆ ಬಂದಿದ್ದರು, ಆದರೆ ೧೨ ವರ್ಷದ ವೀರಾಜೀ (ಭಗತ್ ಸಿಂಗ್) ಮಾತ್ರ ಮನೆಗೆ ಬಂದಿರಲಿಲ್ಲ. ಆದ್ದರಿಂದ ವೀರಾಜೀಯ ತಂದೆ ತಾಯ ಆತಂಕಗೊಂಡಿದ್ದರು. | 2 |
| | IV | ಬಲ್ಲವರೊಡನೆ ಸಂಗವ ಮಾಡಿದರೆ ಮೊಸರನ್ನು ಹೊಸೆದು ಬೆಣ್ಣೆಯನ್ನು ತೆಗೆದುಕೊಂಡಂತಹ ಮತ್ತು ಅರಿಯದವರ ಸಂಗವ ಮಾಡಿದರೆ ಕಲ್ಲನ್ನು ಹೊಡೆದು ಕಿಡಿಯನ್ನು ಹೊತ್ತಿಸಿಕೊಂಡಂತೆ ಪರಿಣಾಮ ಉಂಟಾಗುತ್ತದೆ. | 2 |
| 12 | | **ಗದ್ಯಭಾಗದ 5-6 ವಾಕ್ಯಗಳ ಉತ್ತರಗಳು** | |
| | I | ಡಾ. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನೆಂದರೆ, - ಟೆಲಿವಿಷನ್‌ನಲ್ಲಿ ಯಾವುದಾದರೂ ಕೊಲೆಯ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡುತ್ತಿದ್ದವರ ದುಃಖದ ಭಾವನೆಯು ಅದೇ ಟೆಲಿವಿಷನ್‌ನಲ್ಲಿ ಯಾವುದಾದರೂ ನೃತ್ಯದ ದೃಶ್ಯ ಬಂದಾಗ ಅದನ್ನು ನೋಡುತ್ತಿದ್ದವರ ಖುಷಿ ಭಾವನೆಯು ಉಂಟಾಗುತ್ತದೆ ಎಂಬ ಉದಾಹರಣೆಗಳ ಮೂಲಕ ನಿಜವನ್ನು ಹೇಳಲು ಬಯಸುತ್ತಾರೆ. ಈ ನಿಜ ಏನನ್ನು ಹೇಳುತ್ತದೆ? ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ಎಂದು ಹೇಳುತ್ತದೆ. ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೇನೊ. ಈ ಅನುಕಂಪನ ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ. | 3 |
| | | **ಪದ್ಯಭಾಗದ 5-6 ವಾಕ್ಯಗಳ ಉತ್ತರಗಳು** | |
| | II | ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಂಡು , ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು . ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದು ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು . ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು. | 3 |
| 13 | | **ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಹಾಗೂ ಸ್ವಾರಸ್ಯದೊಡನೆ ವಿವರಿಸಿ** | |
| | I | ಆಯ್ಕೆ : ಈ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರ ಸಮಗ್ರ ಲಲಿತ ಪ್ರಬಂಧಗಳು ಎಂಬ ಸಂಕಲನದಿಂದ ಆಯ್ದ ವ್ಯಾಘ್ರಗೀತೆ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಸಂದರ್ಭ : ಶಾನುಭೋಗರು ಖಿರ್ದಿ ಪುಸ್ತಕವನ್ನು ಹುಲಿಯ ಮುಖಕ್ಕೆ ಎಸೆದಾಗ ಅದರ ಮುಖಕ್ಕೆ ಬಂದು ಬಡಿಯಿತು. ಆದರೆ ಹುಲಿಗೆ ಪೆಟ್ಟೇನೂ ಆಗಲಿಲ್ಲ ಎಂಬುದು ಶಾನುಭೋಗರ ಮನಸ್ಸಿಗೆ ಅರಿವಾಗಲು ಅರೆನಿಮಿಷ ಹಿಡಿಯಿತು. ಆ ಅರೆ ನಿಮಿಷದಲ್ಲಿ ಶಾನುಭೋಗರು "ದೇವರೆ, ಮರಹತ್ತುವಷ್ಟು ಅವಕಾಶ ಕರುಣಿಸು" ಎನ್ನುತ್ತಾ ಒಂದೇ ಉಸಿರಿನಲ್ಲಿ ಮರದ ಕಡೆಗೆ ಧಾವಿಸಿದ ಸಂದರ್ಭವಾಗಿದೆ .<br>ಸ್ವಾರಸ್ಯ : ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಬಹುಸ್ವಾರಸ್ಯಪೂರ್ಣವಾಗಿದೆ.<br>**ಅಥವಾ (OR)**<br>ಆಯ್ಕೆ:- ಈ ವಾಕ್ಯವನ್ನು ಶ್ರೀ. ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ "ಭಾಗ್ಯಶಿಲ್ಪಿಗಳು" (ಸರ್. ಎಂ. ವಿಶ್ವೇಶ್ವರಯ್ಯ) ಎಂಬ ಪಾಠದಿಂದ ಆರಿಸಲಾಗಿದೆ. | 3 |

| | | | |
|---|---|---|---|
| | | ಸಂದರ್ಭ:- ವಿಶ್ವೇಶ್ವರಯ್ಯನವರ ಮುಂಬೈ ಪ್ರಾಂತ್ಯದಲ್ಲಿ ಸಹಾಯಕ ಇಂಜಿನಿಯರಾಗಿ ಅನೇಕ ಮಾಡಿದ್ದರು. ಹಾಗೆಯೇ ಪೂನಾದಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿದರು. ಸ್ವಯಂಚಾಲಿತ ಬಾಗಿಲುಗಳಅನ್ವೇಷಣೆ ವಿಶ್ವೇಶ್ವರಯ್ಯ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು ಎಂದು ಅವರ ಸಾಧನೆಯನ್ನು ಹೊಗಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ.<br>ಸ್ವಾರಸ್ಯ:- ವಿಶ್ವೇಶ್ವರಯ್ಯನವರ ಅನ್ವೇಷಣೆಗಳು ಸಾಧನೆಗಳು ಸರಮಾಲೆಯಾಗಿ ರೂಪುಗೊಂಡಿರುವುದು ಅವರ ಭೌದ್ಧಿಕ ಯಶಸ್ಸಿನ ಕಿರೀಟದ ಗರಿಗಳಾಗಿವೆ ಎಂಬುದು ಸ್ವಾರಸ್ಯಪೂರ್ಣವಾಗಿದೆ. | |
| | **II** | ಆಯ್ಕೆ :- ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು'ಕೃತಿಯಿಂದ ಆಯ್ದು ನೀಡಿರುವ 'ಹಲಗಲಿಬೇಡರು'ಎಂಬ ಪದ್ಯದಿಂದ ಆರಿಸಲಾಗಿದೆ.<br>ಸಂದರ್ಭ:- ಇದು ಕುಂಪಣಿ ಸರ್ಕಾರ ಹೊರಡಿಸಿದ ಆದೇಶದ ವಾಕ್ಯವಾಗಿದೆ. ಕ್ರಿ.ಶ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ವಿದೇಶದಿಂದ ಕುಂಪಣಿ ಸರಕಾರ ನಿಶ್ಶಸ್ತ್ರೀಕರಣಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿತು.ಇದನ್ನು ವಿರೋಧಿಸಿ ಹಲಗರ ಹಳ್ಳಿ ಸುತ್ತಾ ಮುತ್ತಾ ಮೆರೆಯಿತು ಎಂದ ಲಾವಣಿಕಾರ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>ಸ್ವಾರಸ್ಯ:- ಭಾರತೀಯರನ್ನು ನಿಶ್ಶಸ್ತ್ರೀಕರಣಗೊಳಿಸಬೇಕೆಂಬ ಕುಂಪಣಿ ಸರ್ಕಾರದ ದರ್ಪ ಈ ವಾಕ್ಯದಲ್ಲಿ ಸ್ವಾರಸ್ಯ ಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.<br>**ಅಥವಾ (OR)**<br>ಆಯ್ಕೆ : ಈ ವಾಕ್ಯವನ್ನು ಕುವೆಂಪು ಅವರ ' ಪಕ್ಷಿಕಾಶಿ ' ಕವನ ಸಂಕಲನದಿಂದ ಆರಿಸಲಾಗಿರುವ ಎಂಬ ಪದ್ಯದಿಂದ ತೆಗೆದುಕೊಳ್ಳಲಾಗಿದೆ.<br>ಸಂದರ್ಭ : ಹೊಸ ಹೂವಿನ ಕಂಪು , ಬೀಸುವ ಗಾಳಿಯ ತಂಪು , ಹಕ್ಕಿಯ ಕೊರಲಿನಿಂದ ಹೊರಟ ಗಾನದ ಇಂಪು , ಅಲ್ಲದೆ ಇಡೀ ಭೂಮಿಯ ಶ್ವಾಸವೆಲ್ಲಾ ಹಸುರುಮಯವಾಗಿದೆ ಎಂದು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ . ಇಲ್ಲಿ ಹೂವು - ಗಾಳಿ ಹಕ್ಕಿಯ ಗಾನಗಳಲ್ಲಿ ಬೇರೆ ಬೇರೆ ಅನುಭವವಿದ್ದರೂ ಕವಿಯ ಏಕತಾ ದೃಷ್ಟಿಯಲ್ಲಿ ಎಲ್ಲದರಲ್ಲೂ ಹಸುರೇ ಕಾಣುತ್ತದೆ.<br>ಸ್ವಾರಸ್ಯ : ಹಸುರು ಸರ್ವೇಂದ್ರಿಯಗಳನ್ನೂ ವ್ಯಾಪಿಸಿದೆ ಎಂದು ವರ್ಣಿಸಿರುವ ಕವಿಯ ಕಲ್ಪನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. | **3** |
| | | **ಗದ್ಯಭಾಗದ 8-10 ವಾಕ್ಯಗಳ ಉತ್ತರಗಳು** | |
| **14** | **I** | ನಾಲ್ವಡಿ ಕೃಷ್ಣರಾಜ ಒಡೆಯರು ೧೯೦೨ ರಲ್ಲಿ ಮೈಸೂರು ರಾಜ್ಯದ ನೇರ ಉಸ್ತುವಾರಿ ವಹಿಸಿಕೊಂಡರು. ಆಗ ದಿವಾನರಾಗಿದ್ದ ಸರ್. ಕೆ. ಶೇಷಾದ್ರಿ ಅಯ್ಯರ್‌ರವರು ಸಹಕಾರದೊಡನೆ ಮೈಸೂರು ರಾಜ್ಯದ ಸರ್ವೋತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. ೧೯೨೩ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದರು ಪ್ರಜಾಪ್ರತಿನಿಧಿ ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ೧೯೦೭ ರಲ್ಲಿ ನ್ಯಾಯ ವಿಧಾಯಕ ಸಭೆಯನ್ನೂ ಸಹ ಸ್ಥಾಪಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನೂ ಸಹ ವಿರ್ಮಶಿಸುವ ಅಧಿಕಾರ ಆಸಕ್ತಿ ಇದ್ದಿತು. ೧. ಗ್ರಾಮ ನಿರ್ಮಲೀಕರಣ ೨. ವೈದ್ಯ ಸಹಾಯ ೩. ವಿದ್ಯಾ ಪ್ರಚಾರ ೪. ನೀರಿನ ಸೌಕರ್ಯ ೫. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳಲ್ಲಿ ಸ್ವಯಂ ಆಡಳಿತ ಕ್ಷೇತ್ರಗಳಾದವು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. | |

| | | | |
|---|---|---|---|
| | | ನಾಡಿನಲ್ಲೇ ಮೊಟ್ಟಮೊದಲ ವಿಶ್ವವಿದ್ಯಾನಿಲಯ ಮೈಸೂರು ವಿಶ್ವವಿದ್ಯಾನಿಲಯ, ಕನ್ನಡ ಸಾಹಿತ್ಯ ಪರಿಷತ್, ಮೈಸೂರು ಬ್ಯಾಂಕ್, ರೈಲು ಯೋಜನೆ, ಜಲವಿದ್ಯುತ್ ಯೋಜನೆ, ವಾಣಿ ವಿಲಾಸ ಸಾಗರ, ಕೃಷ್ಣರಾಜಸಾಗರ ಆಣೆಕಟ್ಟು ಸ್ಥಾಪನೆ. ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಉಚಿತ ಮತ್ತು ಕಡ್ಡಾಯವಾಗಿ ಪ್ರಾರಂಭವಾಯಿತು. ಸಾಮಾಜಿಕ ಕಾನೂನುಗಳು ಜಾರಿಗೆ ಬಂದವು. ಇವೆಲ್ಲವೂ ಇವರ ಕಾಲದಲ್ಲಿ ಇಡೀ ¨ ಯಾವ ಸಂಸ್ಥಾದಲ್ಲಿ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡುದರಿಂದ , ಮೈಸೂರು ಮಾದರಿ ಮೈಸೂರು ರಾಜ್ಯ' ಎಂಬ ಕೀರ್ತಿಗೆಗೆ ಪ್ರಾಪ್ತವಾಯಿತು.<br>**ಅಥವಾ (OR)**<br>ರಾಮಲಕ್ಷ್ಮಣರ ಬಂದು ತನ್ನ ಮುಂದೆ ನಿಂತಿರುವದನ್ನು ಕಂಡು ಶಬರಿ ಬೆರಗಾದಳು. ಬೆರಗು ಕಳೆದ ಮೇಲೆ ರಾಮನ ಹತ್ತಿರಕ್ಕೆ ಬಂದು ಮೈಯನ್ನು ಮುಟ್ಟಿ ಪಾದಕ್ಕೆ ಬಿದ್ದಳು. ಕೈಯನ್ನು ಕಣ್ಣಿಗೆ ಒತ್ತಿಕೊಂಡು ಆನಂದದ ಕಣ್ಣೀರನ್ನು ಸುರಿಸಿದಳು. ಬನ್ನಿರಿ ಎಂದು ಗದ್ಗದಿಸುತ್ತಾ ಅಯ್ಯೋ ಏನೂ ಸಿದ್ಧವೇ ಇಲ್ಲ. ನಿನ್ನೆಯಷ್ಟು ಚೆಂದವಿಲ್ಲ ಎನ್ನುತ್ತ ಬಹಳ ಹಂಬಲಿಸಿದಳು.ತನ್ನ ಮನದ ಬಯಕೆಯಂತೆ ಬಗೆ ಬಗೆಯ ಸುವಾಸನೆಯನ್ನು ಬೀರುವ ಕಾಡಿನ ಹೂವುಗಳಿಂದ ಮಾಡಿದ ಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಂಭ್ರಮಿಸಿದಳು. ತಾನು ತಂದಿದ್ದ ರುಚಿಯಾದ ಹಣ್ಣುಗಳನ್ನು ತಾನೆ ರಾಮಲಕ್ಷ್ಮಣರ ಕೈಯೊಳಗೆ ಇಟ್ಟು ಜಗದೊಳಗೆ ಇದದ್ದಷ್ಟು ರುಚಿಯಾದ ಹಣ್ಣು ಯಾವುದು ಇಲ್ಲ , ನಿಮಗಾಗಿ ತಂದಿರುವೆನು ಎಂದು ತಿನ್ನಲು ಹೇಳಿದಳು. ಮಧುಪರ್ಕವನ್ನು ಸವಿಯಲು ಕೊಟ್ಟಳು. ಶಬರಿಯ ಆತಿಥ್ಯದಿಂದ ರಾಜಕುಮಾರರಾದ ರಾಮಲಕ್ಷ್ಮಣರು ಸುಪ್ರಸನ್ನರಾಗಿ ಮಂದಹಾಸ ತೋರಿದರು.ಇದನ್ನು ನೋಡಿದ ಶಬರಿ ಧನ್ಯತಾಭಾವದಿಂದ ಕೂಡಿದವಳಾದಳು. ಹೀಗೆ ಶಬರಿ ರಾಮಲಕ್ಷ್ಮಣರನ್ನು ಉಪಚರಿಸಿದಳು. | 4 |
| | | **ಪದ್ಯಭಾಗದ 8-10 ವಾಕ್ಯಗಳ ಉತ್ತರಗಳು** | |
| **15** | **I** | ಕೃಷ್ಣನಿಂದ ತನ್ನ ಜನ್ಮರಹಸ್ಯವನ್ನು ತಿಳಿದರೂ ಕೂಡ ಕರ್ಣ ಯಾವುದೇ ಆಮಿಷಕ್ಕೆ ಒಳಗಾಗದೆ ದುರ್ಯೋಧನನೇ ತನಗೆ ಒಡೆಯ, ಆತನ ಹಗೆಗಳು ನನಗೂ ಹಗೆಗಳೇ, ಆತನ ಅಭಿಮಾನ ನನ್ನ ಅಭಿಮಾನ, ದುರ್ಯೋಧನನ ಹಾದಿಯನ್ನೇ ಅನುಸರಿಸುತ್ತೇನೆ.'ಯುದ್ದದಲ್ಲಿ ನಿಜ ಉಪಕಾರವನ್ನು ಶ್ರೇಷ್ಠತೆಯನ್ನು ತೋರಿಸುತ್ತೇನೆ' ಎನ್ನುವುದು ಕರ್ಣನ ಜಾಯಮಾನಕ್ಕೆ ಸರಿಯಾಗಿದೆ ಇದೆ . ಕೌರವನು ತನಗೆ ಮಾಡಿದ ಉಪಕಾರವನ್ನು ಯುದ್ಧರಂಗದಲ್ಲಿ ತೀರಿಸುತ್ತೇನೆ. ತಮ್ಮಂದಿರನ್ನು ನೋಯಿಸದೆ, ಸೈನ್ಯಬಲವನ್ನು ಮಾರಿಗೆ ಔತಾಣವನ್ನಾಗಿ ನೀಡಿ, ಅನ್ನದಾತನ ಋಣವನ್ನು ಮುಗಿಸಿ, ಶರಿರವನ್ನು ತ್ಯಜಿಸುತ್ತೇನೆ' ಎಂಬ ಕರ್ಣನ ಮಾತು ಆತನ ಭಕ್ತಿಗೆ ಸಾಕ್ಷಿಯಾಗಿದೆ.<br>ಇಂದು ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ಸನ್ನಿವೇಶಗಳಲ್ಲಿ ಹಣದ ಆಮಿಷವನ್ನು ನೀಡಲಾಗುತ್ತದೆ. ಅಧಿಕಾರವನ್ನು ಪಡೆಯಲು ವಾಮ ಮಾರ್ಗವನ್ನು ಹಿಡಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಇಂತಹ ಪರಿಸ್ಥಿತಿಯಲ್ಲಿ ಕರ್ಣನ ನಿರ್ಧಾರಗಳು ನಿಜವಾಗಿಯೂ ಮರುಕಳಿಸಬೇಕು ಪ್ರಜೆಗಳನ್ನು ರಕ್ಷಿಸಲು ಯಾವುದೇ ರೀತಿಯ ಆಮಿಷಗಳನ್ನು ನೀಡುವುದಾಗಲಿ, ಆಮಿಷಗಳಿಗೆ ಬಲಿಯಾಗುವುದಾಗಲಿ, ಆಗಕೂಡದು ಎಂಬ ವಿಚಾರವನ್ನು ಕರ್ಣನ ಪಾತ್ರದಿಂದ ತಿಳಿಯಬಹುದಾಗಿದೆ.<br>**ಅಥವಾ** (OR)<br>'ಕಾಡಿನ ಹಸಿರೇ ನಾಡಿನ ಉಸಿರು' ಎಂಬ ನಾಣ್ಣುಡಿಯಂತೆ ಹಸಿರು ಪ್ರತಿ ಸಕಲಜೀವಿಗಳಿಗೆ ಅತಿ ಮುಖ್ಯವಾದುದಾಗಿದೆ. ಹಚ್ಚ ಹಸುರಿನ ಭೂಮಿಯು ತನ್ನೊಡಲಲ್ಲಿ ಪಶು, ಪಕ್ಷಿ, ಪ್ರಾಣಿ ಸಕಲ ಜೀವರಾಶಿಗಳನ್ನು ತನ್ನೊಡಲ ಕುಡಿಯಂತೆ ನಿಸ್ವಾರ್ಥದಿಂದ ರಕ್ಷಿಸುತ್ತದೆ. ಪ್ರಕೃತಿಯ 'ಹಸುರು' | 4 |

| | | | |
|---|---|---|---|
| | | ಅಂದರೆ ಸಸ್ಯ ಸಂಪತ್ತು. ಈ ಸಸ್ಯ ಸಂಪತ್ತು ಜೀವ ಜಗತ್ತಿಗೆ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಸಸ್ಯಗಳು ಆಮ್ಲಜನಕವನ್ನು ಉತ್ಪಾದಿಸುತ್ತವೆ. ಈ ಆಮ್ಲಜನಕವೇ ಎಲ್ಲಾ ಜೀವಿಗಳಿಗೆ ಉಸಿರಾಡಲು ಅವಶ್ಯಕ. ಸಸ್ಯಗಳು ವಾಯುಮಂಡಲದಲ್ಲಿನ ಹೆಚ್ಚುವರಿ ಕಾರ್ಬನ್ ಡೈ ಆಕ್ಸೈಡ್ ಅನ್ನು ಹೀರಿಕೊಂಡು ಹವಾಮಾನ ಬದಲಾವಣೆಯನ್ನು ತಡೆಯಲು ಸಹಾಯ ಮಾಡುತ್ತವೆ. ಸಸ್ಯಗಳ ಬೇರುಗಳು ಮಣ್ಣನ್ನು ಬಂಧಿಸಿ ಮಣ್ಣಿನ ಸವೆತವನ್ನು ತಡೆಯುತ್ತವೆ. ಇದರಿಂದಾಗಿ ನದಿಗಳು, ಸರೋವರಗಳು ಇತ್ಯಾದಿಗಳಲ್ಲಿ ಮಣ್ಣು ಸೇರುವುದು ಕಡಿಮೆಯಾಗುತ್ತದೆ.<br>ಅನೇಕ ಜೀವಿಗಳು ಸಸ್ಯಗಳನ್ನು ಆಶ್ರಯವಾಗಿ ಬಳಸಿಕೊಳ್ಳುತ್ತವೆ. ಪಕ್ಷಿಗಳು ಗೂಡು ಕಟ್ಟಲು, ಕೀಟಗಳು ಆಹಾರ ಹುಡುಕಲು ಮತ್ತು ಇತರ ಸಣ್ಣ ಪ್ರಾಣಿಗಳು ಅಡಗಿಕೊಳ್ಳಲು ಸಸ್ಯಗಳು ಅವಶ್ಯಕ. ಅನೇಕ ಸಸ್ಯಗಳು ಔಷಧೀಯ ಗುಣಗಳನ್ನು ಹೊಂದಿರುತ್ತವೆ ಮತ್ತು ಅವುಗಳನ್ನು ರೋಗಗಳನ್ನು ಗುಣಪಡಿಸಲು ಬಳಸಲಾಗುತ್ತದೆ. ಸಸ್ಯಗಳು ನೇರವಾಗಿ ಅಥವಾ ಪರೋಕ್ಷವಾಗಿ ಎಲ್ಲಾ ಜೀವಿಗಳಿಗೆ ಆಹಾರವನ್ನು ಒದಗಿಸುತ್ತವೆ. ಸಸ್ಯಗಳು ಇಲ್ಲದೆ ಜೀವನ ಇರುವುದು ಅಸಾಧ್ಯ. ಆದ್ದರಿಂದ ನಾವು ಪ್ರಕೃತಿಯನ್ನು ಸಂರಕ್ಷಿಸುವುದು ಬಹಳ ಮುಖ್ಯ. ಅದಕ್ಕಾಗಿ ನಾವು ಏನು ಮಾಡಬೇಕು? ಹೆಚ್ಚು ಮರಗಳನ್ನು ನೆಡೋಣ. ಕಾಗದವನ್ನು ಮರುಬಳಕೆ ಮಾಡೋಣ. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡೋಣ. ನೀರನ್ನು ಉಳಿಸೋಣ.<br>ನಾವು ಈ ಕೆಲಸಗಳನ್ನು ಮಾಡುವ ಮೂಲಕ ನಮ್ಮ ಭವಿಷ್ಯದ ಪೀಳಿಗೆಗಾಗಿ ಒಂದು ಹಸುರು ಮತ್ತು ಸುಂದರವಾದ ಭೂಮಿಯನ್ನು ನಿರ್ಮಿಸಬಹುದು. | |
| | | | |

**************